# VI. ವಾಣಿಜ್ಯ ಬೆಳೆಗಳು

## 33. ಕಬ್ಬು

ಕಬ್ಬು ರಾಜ್ಯದ ಪ್ರಮುಖವಾದ ಆರ್ಥಿಕ ಬೆಳೆಗಳಲ್ಲಿ ಒಂದು. ಈ ಬೆಳೆಯು ಮುಖ್ಯವಾಗಿ ರಾಜ್ಯದ ದಕ್ಷಿಣ ಭಾಗದ ಮಂಡ್ಯ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕೇಂದ್ರೀಕೃತವಾಗಿದೆ.

**ತಳಿಗಳು ಮತ್ತು ವಿಶೇಷ ಗುಣಗಳು**

| *ತಳಿ* | *ನಾಟಿ ಕಾಲ* | *ಅವಧಿ (ತಿಂಗಳು)* | *ಇಳುವರಿ (ಟನ್/ಎ)* | | | *ತಳಿಗಳ ವಿಶೇಷ ಗುಣಗಳು* |
|---|---|---|---|---|---|---|
| | | | *ಜೂನ್ – ಆಗಸ್ಟ್* | *ಅಕ್ಟೋಬರ್ – ನವೆಂಬರ್* | *ಜನವರಿ– ಫೆಬ್ರವರಿ* | |
| **ಸಿ.ಓ 62175** | ಜೂನ್–ಆಗಸ್ಟ್ ಅಕ್ಟೋಬರ್– ನವೆಂಬರ್ | 12–14 | 60–70 | 55–60 | – | ಕೆಂಪು ನೀಳ ಎಲೆ ಚುಕ್ಕೆ ರೋಗವನ್ನು ತಡೆದುಕೊಳ್ಳುವ ಶಕ್ತಿಯಿದೆ. ಚೌಳು ಮತ್ತು ಸಮಸ್ಯಾತ್ಮಕ ಸನ್ನಿವೇಶಗಳಲ್ಲಿಯೂ ಹೊಂದಿಕೊಳ್ಳುವಂತಹ ತಳಿ. |
| ಸಿ.ಓ **86032** (ನಯನ) | ಜೂನ್–ಆಗಸ್ಟ್ ಅಕ್ಟೋಬರ್– ನವೆಂಬರ್ ನವೆಂಬರ್ ಜನವರಿ– ಫೆಬ್ರವರಿ | 12–13 | 60–65 | 50–55 | 45–50 | ಉತ್ತಮವಾದ ಬೆಲ್ಲ ತಯಾರಿಕೆಗೆ ಯೋಗ್ಯವಾದ ತಳಿ. ಹಳದಿ ಎಲೆ ರೋಗದ (YLD) ಬಾಧೆಗೆ ತುತ್ತಾಗುತ್ತದೆ. ತಗ್ಗು ಸಮಸ್ಯಾತ್ಮಕ ಮಣ್ಣಿಗೆ ಅಥವಾ ನೀರಿನ ಕೊರತೆ ಹೆಚ್ಚಾಗಿರುವ ಪ್ರದೇಶಕ್ಕೆ ಸೂಕ್ತವಲ್ಲ. |
| **ಸಿ.ಓ 8371 (ಭೀಮ)** | ಆಗಸ್ಟ್– ನವೆಂಬರ್ | 12–13 | 65–70 | 50–55 | – | ಶುಷ್ಕ ವಾತಾವರಣ ತಡೆಯುವ ಸಾದಾರಣ ಸಾಮರ್ಥ್ಯವಿದೆ. ಕೆಂಪು ನೀಳ ಎಲೆ ಚುಕ್ಕೆ ರೋಗದ ಬಾಧೆಯನ್ನು ತಡೆದುಕೊಳ್ಳುವ ಶಕ್ತಿಯಿದೆ |
| **ಸಿ.ಓ.ವಿ.ಸಿ 99463 (ವಿಶಾಲ್)** | ಜುಲೈ– ನವೆಂಬರ್ | 12–13 | 65–70 | 55–60 | – | ಉತ್ತಮ ತೆಂಡೆಯೊಡೆಯುವ ಸಾಮರ್ಥ್ಯವಿದೆ. ನೀರಿನ ಕೊರತೆ ತಡೆದುಕೊಳ್ಳುವ ಶಕ್ತಿಯಿದೆ. |
| **ವಿ.ಸಿ.ಎಫ್ 0517 (ಬಾಹುಬಲಿ)** | ಜುಲೈ– ನವೆಂಬರ್ | 12–14 | 70–80 | 60–70 | – | 5 ಅಡಿ ಅಂತರ ಬೇಸಾಯಕ್ಕೆ ಸೂಕ್ತ. ಉತ್ತಮ ತೆಂಡೆಯೊಡೆಯುವ ಸಾಮರ್ಥ್ಯವಿದೆ. ಸ್ವಲ್ಪ ಮಟ್ಟಿಗೆ ನೀರಿನ ಕೊರತೆ ತಡೆದುಕೊಳ್ಳುವ ಶಕ್ತಿಯಿದೆ. ಉತ್ತಮ ಕೂಳೆ ಬೆಳೆ ಸಾಮರ್ಥ್ಯ ಹೊಂದಿದೆ. ಬೆಲ್ಲ ತಯಾರಿಕೆಗೆ ಯೋಗ್ಯವಾದ ತಳಿ. |

**ವಿಶೇಷ ಸೂಚನೆಗಳು:**

- ಶಾಖೋಪಚಾರ ಮಾಡಿ ಬೆಳೆದ 8–10 ತಿಂಗಳಿನ ಮೂಲ ಬಿತ್ತನೆ ಬೀಜದ ಕಬ್ಬಿನ ಬೆಳೆಯಿಂದ ಆರಿಸಿದ ರೋಗರಹಿತ ಕಬ್ಬಿನ ತುಂಡುಗಳನ್ನೇ ಬಿತ್ತನೆಗೆ ಬಳಸುವುದು.
- ಬಿತ್ತನೆ ತುಂಡುಗಳನ್ನು ಪ್ರತಿ ಲೀಟರ್ ನೀರಿಗೆ ಒಂದು ಗ್ರಾಂ. ಕಾರ್ಬೆಂಡೈಜಿಂ ಬೆರೆಸಿದ ದ್ರಾವಣದಲ್ಲಿ 15 ನಿಮಿಷ ಅದ್ದಿ ಬಿತ್ತನೆ ಮಾಡುವುದು.